ಕೆಲವೇ ವರ್ಷಗಳ ಹಿಂದೆ ಸಂಗೀತ, ಸಿನೆಮಾ, ಟಿ.ವಿ. ಗಳ ಮೂಲಕ ಉತ್ತಮ ಮನೋರಂಜನೆಯ ಕಾರ್ಯಕ್ರಮಗಳು ಪ್ರದರ್ಶಿಸಲ್ಪಡುತ್ತಿದ್ದವು. ಈಗ ಅದು ತದ್ವಿರುದ್ಧವಾಗಿದೆ. ಸಿನೆಮಾ, ಟಿ.ವಿ. ಹಾಗೂ ಸಂಗೀತಗಳು ಹಿಂಸಾಪ್ರಚೋದಕ ವಿಷಯಗಳತ್ತ ಸಾಗಿವೆ. ಲೈಂಗಿಕ ಪ್ರದರ್ಶನಗಳೂ ಹೆಚ್ಚುತ್ತಿವೆ. ನೃತ್ಯಭಂಗಿಗಳ ಹೆಸರಿನಲ್ಲಿ ಟಿ.ವಿ. ಮಾಧ್ಯಮಗಳು ಅಶ್ಲೀಲ ಚಿತ್ರಗಳನ್ನು ಚಿತ್ರೀಕರಿಸಿ ಹಣ ಸಂಪಾದನೆ ಮಾಡಿಕೊಳ್ಳುತ್ತಿವೆ. ಇದು ಮಕ್ಕಳ ಸನ್ನಡತೆಗೆ ಮಾರಕವೆಂದು ಯಾರೂ ತಲೆ ಕೆಡಿಸಿ ಕೊಳ್ಳುವುದೇ ಇಲ್ಲ. ಸಿಹಿಲೇಪನದ ವಿಷಗುಳಿಗೆ ಇದು. ಇವು ಮಕ್ಕಳನ್ನು ಕುಸಂಸ್ಕೃತಿಯತ್ತ ಸೆಳೆಯುತ್ತಿವೆ, ದುಷ್ಕಾರ್ಯಗಳಿಗೆ ಪ್ರೇರೇಪಿಸುತ್ತಿವೆ.

ಈಗಿನ ವಿದ್ಯಾಭ್ಯಾಸ ಹಾಗೂ ಉತ್ತಮ ಭವಿಷ್ಯದ ಕಲ್ಪನೆ ಮಕ್ಕಳ ಮಾನಸಿಕ ಒತ್ತಡಕ್ಕೆ ಪ್ರಬಲ ಕಾರಣವಾಗಿವೆ. ಪೋಷಕರೂ ಸಹ ಇದನ್ನೇ ಪ್ರೋತ್ಸಾಹಿಸುತ್ತಾರೆ. ತರಗತಿಯಲ್ಲಿ ತಮ್ಮ ಮಕ್ಕಳು ಪ್ರಥಮ ಸ್ಥಾನವನ್ನೇ ಪಡೆಯಬೇಕು, ಕೇವಲ ಓದಿನಲ್ಲಷ್ಟೇ ಅಲ್ಲ. ಆಟ, ಸಂಗೀತ, ನೃತ್ಯ ಯಾವುದೇ ವಿಷಯವಿರಲಿ ಪ್ರಥಮಸ್ಥಾನವನ್ನೇ ಪಡೆಯಬೇಕೆಂಬ ಮಹತ್ವಾಕಾಂಕ್ಷೆ ಪೋಷಕ ರದು. ಮಕ್ಕಳಿಗೆ ಆಸಕ್ತಿ ಇದೆಯೋ ಇಲ್ಲವೋ ಎಂಬುದನ್ನು ಗಮನಿಸುವುದೇ ಇಲ್ಲ. ಮಕ್ಕಳು ತಮ್ಮ ಅಭಿರುಚಿಗೆ ತಕ್ಕಂತೆ, ಸ್ವತಂತ್ರವಾಗಿ ಕಲಿಯಲು ಅವಕಾಶವೇ ಇಲ್ಲ. ಇದೂ ಒಂದು ರೀತಿಯಲ್ಲಿ ಮಕ್ಕಳಿಗೆ ಹಿಂಸೆಯೇ. ಪೋಷಕರು ಮಕ್ಕಳ ಮನೋಭಿಲಾಷೆಯನ್ನು ತಿಳಿದು, ಒತ್ತಡ ಹೇರದೆ, ಅವರಲ್ಲಿರುವ ಪ್ರತಿಭೆಯನ್ನು ವೃದ್ಧಿಸಲು ಪ್ರೋತ್ಸಾಹ ಕೊಡುವುದು ಒಳ್ಳೆಯದು. ಇದರಿಂದ ಮಕ್ಕಳನ್ನು ಒತ್ತಡದಿಂದ ಮುಕ್ತರನ್ನಾಗಿಸಬಹುದು. ಆದರೆ ಪೋಷಕರು ತಮ್ಮದೇ ಕೆಲಸಗಳ ಒತ್ತಡದಿಂದಾಗಿ ಮಕ್ಕಳ ಕಡೆ ಗಮನ ನೀಡುವಷ್ಟೂ ಬಿಡುವು ಹೊಂದಿರುವುದಿಲ್ಲ.

ಮಕ್ಕಳ ಸರ್ವಾಂಗೀಣ ಉನ್ನತಿಗೆ ಯುಕ್ತ ವಾತಾವರಣ ಹಾಗೂ ಪರಿಸರವನ್ನು ಕಲ್ಪಿಸಬೇಕಾದದ್ದು, ಅವರನ್ನು ಸುಸಂಸ್ಕೃತ ರನ್ನಾಗಿ ಬೆಳೆಸುವ ಜವಾಬ್ದಾರಿ ತಾಯಿತಂದೆಯರದ್ದು. ಇದು ಅನಿವಾರ್ಯವೆಂಬುದನ್ನು ಅವರು ಮನಗಾಣ ಬೇಕು. ಮಕ್ಕಳ ನಡೆನುಡಿ ಚೆನ್ನಾಗಿರಬೇಕಾದರೆ, ತಾಯಿ ತಂದೆಯರ ನಡೆನುಡಿಯೂ ಚೆನ್ನಾಗಿರಬೇಕು. ಮಕ್ಕಳಿಗೆ ಶಿಕ್ಷಣ ನೀಡಬೇಕಾದರೆ, ಮಾತಿನಲ್ಲಿ ತಿಳಿಸುವುದಕ್ಕಿಂತ ಆಚರಣೆ ಯಲ್ಲಿ ತೋರಿಸುವುದು ಹೆಚ್ಚು ಉಪಯುಕ್ತ. ತಾಯಿತಂದೆಯರ ಉತ್ತಮ ನಡವಳಿಕೆಯ ಪ್ರಭಾವದಿಂದಲೇ ಅಲ್ಲವೇ, ಬಾಲಕ ಶಿವ 'ಛತ್ರಪತಿ ಶಿವಾಜಿ' ಯಾದದ್ದು; ಮೋಹನದಾಸ 'ಮಹಾತ್ಮ ಗಾಂಧಿ' ಎನಿಸಿದ್ದು; ತುಂಟ ನರೇಂದ್ರ 'ಸ್ವಾಮಿ ವಿವೇಕಾನಂದ' ರಾಗಿ ವಿಜೃಂಭಿಸಿದ್ದು.

ವಂಶ/ಕುಲಗೌರವದ ಶ್ರದ್ಧೆ, ಬಾಂಧವ್ಯದ ಸವಿ, ಭಾವನಾತ್ಮಕ ರಕ್ಷಣೆ, ಸ್ವಾಭಿಮಾನ ಇತ್ಯಾದಿಗಳು ಶತಮಾನಗಳ ಅನುಭವದ ಮೂಸೆಯಿಂದ ಪರಿಶುದ್ಧವಾಗಿ ಬಂದಿರುವಂಥವು. ಮಕ್ಕಳಿಗೆ ಉತ್ತಮ ಶಿಕ್ಷಣ ಅತ್ಯಂತ ಅವಶ್ಯಕ. ಅವರ ಅಂತರ್ಯವನ್ನು ಅರಿತು, ಅದನ್ನು ಪುಷ್ಟಿಗೊಳಿಸಿ, ವೃದ್ಧಿಪಡಿಸಬೇಕು. ವಿಡಂಬನೆಯೆಂದರೆ, ಇಂದು ಸಮಾಜದಲ್ಲಿ ಎರಡು ಬಗೆಯ ಗುಂಪಿನ ಜನರನ್ನು ಕಾಣುತ್ತಿದ್ದೇವೆ. ಆರ್ಥಿಕವಾಗಿ ಬಡತನದ ಬೇಗೆಯಲ್ಲಿ ಬೆಂದು ನೊಂದಿರುವವರದು ಒಂದು ಗುಂಪು. ಅವರು ಎರಡು ಹೊತ್ತಿನ ಊಟಕ್ಕಾಗಿ ದಿನವಿಡೀ ಶ್ರಮಪಡುತ್ತಾರೆ. ಮಕ್ಕಳ ಲಾಲನೆ, ಪಾಲನೆಯತ್ತ ಗಮನಕೊಡಲು ಅವರಿಗೆ ಬಿಡುವಿಲ್ಲ. ಅಂಥ ಮಕ್ಕಳ ಭವಿಷ್ಯ ಹೇಗೆ ಉತ್ತಮವಾದೀತು?

ಇನ್ನೊಂದು ಗುಂಪಿನ ಜನ ಧನದಾಹಿಗಳು. ಹಣ ಸಂಪಾದನೆಯೇ ಅವರ ಗುರಿ! ಅದಕ್ಕೇ ವಿಶೇಷ ಗಮನ. ಅವರಿಗೂ ತಮ್ಮ ಮಕ್ಕಳನ್ನು ಚೆನ್ನಾಗಿ ಬೆಳೆಸಿ, ಉತ್ತಮ ಪ್ರಜೆಗಳನ್ನಾಗಿ ಮಾಡಬೇಕೆಂಬ ಕಡೆ ದಿವ್ಯನಿರ್ಲಕ್ಷ್ಯ. ಏಕೆಂದರೆ ಅವರಿಗೆ ಬಿಡುವಿಲ್ಲದ ಕಾರ್ಯಗೌರವ! ಆದರೆ ತಮ್ಮ ಮಕ್ಕಳನ್ನು ಪ್ರತಿಷ್ಠಿತ ವ್ಯಕ್ತಿಯನ್ನಾಗಿ ಮಾಡಲು ಹೊಸ ಹೊಸ ವಸ್ತುಗಳನ್ನು ತಂದುಕೊಟ್ಟು ಅವರನ್ನು ಪ್ರಲೋಭನಕ್ಕೆ ಒಳಪಡಿಸುತ್ತಾರೆ. ಮುದ್ದಿನ ಮಾತುಗಳ ಮಳೆಯನ್ನೇ ಸುರಿಸುತ್ತಾರೆ. ಈ ಆಕರ್ಷಕ ವಸ್ತುಗಳಿಂದ, ವಿಪರೀತ ಮುದ್ದಿನಿಂದ ಮಕ್ಕಳು ಲಾಲಸೆಗೆ ಒಳಗಾಗುತ್ತಾರೆಯೇ ಹೊರತು, ಸುಸಂಸ್ಕೃತರಾಗುವುದಂತೂ ಬಹಳ ದೂರದ ಮಾತು.

ಮಕ್ಕಳು ಪ್ರಲೋಭನೆಗೆ ವಶರಾದಾಗ, ಪ್ರತಿಭಾವಂತ ರಾಗುವದಕ್ಕೆ ಬದಲು, ಅಡ್ಡದಾರಿ ಹಿಡಿಯುವ ಸಾಧ್ಯತೆಗಳೇ ಹೆಚ್ಚು. ಅಷ್ಟೇ ಅಲ್ಲ, ತಾವು ಬಯಸಿದ ವಸ್ತುಗಳನ್ನು ಪಡೆಯಲೇಬೇಕೆಂಬ ಹಠವಾದಿಗಳೂ ಆಗುತ್ತಾರೆ. ಪೋಷಕರ ಆರ್ಥಿಕ ಸ್ಥಿತಿ–ಗತಿಗಳ ಬಗ್ಗೆ ಚಿಂತಿಸುವುದಿಲ್ಲ. ಹೇಗಾದರೂ ಸರಿ, ತಮಗೆ ಬೇಕಾದದ್ದು ಸಿಗಲೇಬೇಕೆಂದು ಹಠ ಮಾಡುತ್ತಾರೆ. ಇಂತಹ ಮಕ್ಕಳು ಮುಂದೆ ಎಂತಹ ಕೆಟ್ಟ ಕೆಲಸಗಳನ್ನು ಮಾಡಲೂ ಹೇಸುವುದಿಲ್ಲ. ಆದ್ದರಿಂದ ಪೋಷಕರು ಆಕರ್ಷಣೆಯ/ಬೇಡಿದ ವಸ್ತುಗಳನ್ನು ಕೊಡಿಸಿಬಿಟ್ಟ ಮಾತ್ರಕ್ಕೆ ತಮ್ಮ ಹೊಣೆಗಾರಿಕೆ ತೀರಿತೆಂದು ಭಾವಿಸಬಾರದು.

ಪೋಷಕರು ಸ್ವಚ್ಛ, ಸುಸಂಸ್ಕೃತ ಹಾಗೂ ಆತ್ಮೀಯತೆಯ ಪರಿಸರದಲ್ಲಿ ಮಕ್ಕಳನ್ನು ಬೆಳೆಸದೇ ಹೋದಲ್ಲಿ, ಮಕ್ಕಳಿಂದ ಉತ್ತಮ ಭವಿಷ್ಯವನ್ನು ನಿರೀಕ್ಷಿಸಲಾಗದು. ಮಕ್ಕಳು ಹಸಿ ಜೇಡಿಮಣ್ಣಿನಂತೆ. ಅದನ್ನು ಮೆದುವಾಗಿ, ಹದವಾಗಿ ಸಿದ್ಧಗೊಳಿಸಬೇಕು. ಇಲ್ಲ ವಾದರೆ ಉತ್ತಮ ಆಕೃತಿಯನ್ನು ತಯಾರಿಸಲಾಗುವುದಿಲ್ಲ. ತಾಯಿ–ತಂದೆಯರು ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸಲು ಬದ್ಧಕಂಕಣರಾಗಬೇಕು.

ಬಹಳ ಎಚ್ಚರಿಕೆಯಿಂದ, ಸಮಾಧಾನದಿಂದ ಮಕ್ಕಳ ಮನಸ್ಸಿನ ಆಳಕ್ಕೆ ಇಳಿಯುವಂತೆ ಸುಸಂಸ್ಕೃತಿಯನ್ನು ಬಿತ್ತಬೇಕು. ಹಾಗಾದಾಗ ಮುಂದೆ ಅವರ ಭವಿಷ್ಯ ಸುಂದರವಾಗಿ ಅರಳುವ ಕುಸುಮವಾಗುತ್ತದೆ. ಹೀಗೆ ಮಾಡಿದಾಗ ಮಾತ್ರ ಮಕ್ಕಳು ಸತ್ಪ್ರಜೆಗಳಾಗಿ, ನಾಗರಿಕರಾಗಿ ನಮ್ಮ ಸಂಸ್ಕೃತಿಗೆ ಭಂಗಬಾರದಂತೆ ಬೆಳೆಯುತ್ತಾರೆ. **(ಅನುವಾದ: ಶ್ರೀಮತಿ ಮಂಗಳಮ್ಮ**

**ಆಧಾರ:** 'ಕಲ್ಯಾಣ್' ಹಿಂದೀ ಮಾಸಪತ್ರಿಕೆ)